ಅನುಬಂಧ -- I

ಮೂಡಬಿದ್ರೆಯಲ್ಲಿ ವಸತಿ ನಿವೇಶನಗಳ ಹಂಚಿಕೆ

95 (468) ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದ್ರೆ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ 2006-07, 2007-08 ಮತ್ತು 2008-09ನೇ ಸಾಲಿನಲ್ಲಿ ಮಂಜೂರಾದ ಮನೆ ಹಾಗೂ ನಿವೇಶನಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು)?

ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಮೂಡಬಿದರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2006-07, 2007-08, ಮತ್ತು 2008-09 ನೇ ಸಾಲಿನಲ್ಲಿ ಒಟ್ಟು 746 ಮನೆಗಳು ಮಂಜೂರಾಗಿರುತ್ತವೆ. ವಿವರ ಈ ಕೆಳಗಿನಂತಿದೆ.

ಶ್ರೇಣಿ	2006-07	2007-08	2008-09	ಒಟ್ಟು
ಮನೆಗಳು	420	27	299	746

ಕಳೆದ ಮೂರು ವರ್ಷಗಳಲ್ಲಿ ಯಾವುದೇ ನಿವೇಶನಗಳು ಹಂಚಿಕೆಯಾಗಿರುವುದಿಲ್ಲ.